ಆ) ಇಲ್ಲ

ಇ) ಮೇಲೆ ತಿಳಿಸಿರುವಂತೆ ಜೂನ್ 2009ರಲ್ಲಿ

753 ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ಮತಕ್ಷೇತ್ರದಲ್ಲಿ 'ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಶಾಲಾ ಕೊಠಡಿಗಳನ್ನು ನಿರ್ಮಿಸಲಾಗಿದೆ;

ಆ) ಇದಕ್ಕೆ ವೆಚ್ಚ ಮಾಡಲಾದ ಹಣವೆಷ್ಟು?

ಇ) ಈ ಪೈಕಿ ಎಷ್ಟು ಪೂರ್ಣಗೊಂಡಿವೆ ಹಾಗೂ ಎಷ್ಟು ಅಪೂರ್ಣವಾಗಿವೆ; ಇಲ್ಲಿಯವರೆವಿಗೂ ಎಷ್ಟು ಪ್ರಗತಿಯಯನ್ನು ಸಾಧಿಸಲಾಗಿದೆ.

ಈ) ಈ ಕ್ಷೇತ್ರದಲ್ಲಿ ಶಾಲಾ ಕೊಠಡಿಗಳ ತೀವ್ರವಾದ ಕೊರತೆ ಇದ್ದು ಮೇಲ್ಕಂಡ ಯೋಜನೆಯಡಿಯಲ್ಲಿ ಎಷ್ಟು ಶಾಲಾ ಕೊಠಡಿಗಳನ್ನು ನಿರ್ಮಿಸಲಾಗುವುದು;

ಉ) ಇದಕ್ಕಾಗಿ ವೆಚ್ಚ ಮಾಡಲಾಗುವ ಹಣವೆಷ್ಟು; (ಗ್ರಾಮವಾರು ವಿವರಗಳನ್ನು ಒದಗಿಸುವುದು);

ಊ) ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಯ ಅನುಷ್ಠಾನದ ಬಗ್ಗೆ ಸಾರ್ವಜನಿಕರಿಂದ ದೂರುಗಳೇನಾದರೂ ಇವೆಯೇ? ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ)

ವರ್ಷ	ಕಾಮಗಾರಿ ಹೆಸರು	ನಿರ್ಮಿಸಲಾದ ಕಾಮಗಾರಿ ಸಂಖ್ಯೆ
2006–07	ಹೊಸ ಶಾಲೆ	13
2006–07	ಹೆಚ್ಚುವರಿ ಕೋಣೆ	278
2007–08	ಹೊಸ ಶಾಲೆ	9

2008–09	ಹೊಸ ಶಾಲೆ	5
2008–09	ಹೆಚ್ಚುವರಿ ಕೋಣೆ	36
	ಒಟ್ಟು	**341**

ಆ)

ವರ್ಷ	ಕಾಮಗಾರಿ ಹೆಸರು	ನಿರ್ಮಿಸಲಾದ ಕಾಮಗಾರಿ ಸಂಖ್ಯೆ	ಘಟಕ ವೆಚ್ಚ (ರೂ. ಲಕ್ಷಗಳಲ್ಲಿ)	ಒಟ್ಟು ವೆಚ್ಚ ಮಾಡಲಾದ ಹಣ (ರೂ. ಲಕ್ಷಗಳಲ್ಲಿ)
2006–07	ಹೊಸ ಶಾಲೆ	13	4.10 ಪ್ರತಿ ಶಾಲೆಗೆ	53.3
2006–07	ಹೆಚ್ಚುವರಿ ಕೋಣೆ	278	23 ಪ್ರತಿ ಕೋಣೆಗೆ	639.4
2007–08	ಹೊಸ ಶಾಲೆ	9	6.18 ಪ್ರತಿ ಶಾಲೆಗೆ	55.62
2008–09	ಹೊಸ ಶಾಲೆ	5	9.00 ಪ್ರತಿ ಶಾಲೆಗೆ	45.00
2008–09	ಹೆಚ್ಚುವರಿ ಕೋಣೆ	36	3.8 ಪ್ರತಿ ಕೊಠಡಿಗೆ	136.8
ಒಟ್ಟು		**341**		**390.12**

ಇ)

ವರ್ಷ	ಕಾಮಗಾರಿ ಹೆಸರು	ನಿರ್ಮಿಸಲಾದ ಕಾಮಗಾರಿ ಸಂಖ್ಯೆ	ಪೂರ್ಣಗೊಂಡ ಕಾ.ಸಂ.	ಅಪೂರ್ಣ (ಪ್ರಗತಿಯಲ್ಲಿದ್ದ) ಕಾಮಗಾರಿ ಸಂಖ್ಯೆ	ಪ್ರಗತಿ ಸಾಧಿಸಲಾದ ಪ್ರತಿಶತ
2006–07	ಹೊಸ ಶಾಲೆ	13	13	–	100%
2006–07	ಹೆಚ್ಚುವರಿ ಕೋಣೆ	278	274	4	98.6%

2007–08	ಹೊಸ ಶಾಲೆ	9	4	5	44%
2008–09	ಹೊಸ ಶಾಲೆ	5	2	3	40%
2008–09	ಹೆಚ್ಚುವರಿ ಕೋಣೆ	36	20	16	55%
ಒಟ್ಟು		341	313	28	91.78%

ಈ) 2009–10ನೇ ಸಾಲಿನ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ 4 ಹೊಸ ಶಾಲೆ ಹಾಗೂ 22 ಹೆಚ್ಚುವರಿ ಕೋಣೆಗಳು ಅವಶ್ಯಕತೆಯಿದ್ದು, 2010–11ರ ವಾರ್ಷಿಕ ಯೋಜನೆಯ ಪ್ಲಾನ್‌ನಲ್ಲಿ ಸಲ್ಲಿಸಲಾಗುವುದು.

ಉ) **4 ಹೊಸ ಶಾಲೆಗೆ ಘಟಕ ವೆಚ್ಚ ರೂ.9.00 ಲಕ್ಷ ಪ್ರತಿ ಶಾಲೆಗೆ ಒಟ್ಟು 36.00 ಲಕ್ಷ ಗ್ರಾಮವಾರು ವಿವರ ಈ ಕೆಳಕಂಡಂತಿವೆ.**

1. ಸ.ಕಿ.ಪ್ರಾ.ಶಾಲೆ ದೇವನಾಳ ಉರ್ದು
2. ಸ.ಕಿ.ಪ್ರಾ.ಶಾಲೆ ಯಾಕಬಪೂರ ಬಸವಕಲ್ಯಾಣ ಉರ್ದು
3. ಸ.ಕಿ.ಪ್ರಾ.ಶಾಲೆ ಮನ್ನಳ್ಳಿ ಕನ್ನಡ
4. ಸ.ಕಿ.ಪ್ರಾ.ಶಾಲೆ ಜಾಜನಮುಗಳಿ ಕನ್ನಡ

22 ಹೆಚ್ಚುವರಿ ಕೋಣೆ ಘಟಕ ವೆಚ್ಚ ರೂ.3.80 ಲಕ್ಷ ಪ್ರತಿ ಕೋಣೆಗೆ ಒಟ್ಟು 83.60 ಲಕ್ಷ ಗ್ರಾಮವಾರು ವಿವರ ಈ ಕೆಳಕಂಡಂತಿವೆ.

ಕ್ರ. ಸಂ.	ತಾಲ್ಲೂಕು	ಶಾಲೆಯ ಹೆಸರು	ಮಾಧ್ಯಮ	ಮಂಜೂರಾದ ಕೋಣೆ ಸಂಖ್ಯೆ
1	ಬಸವಕಲ್ಯಾಣ	ಸ.ಹಿ.ಪ್ರಾ.ಶಾಲೆ ಭಂಡಗರವಾಡಿ	ಮರಾಠಿ	1
2		ಸ.ಹಿ.ಪ್ರಾ.ಶಾಲೆ ತಳಭೋಗ	ಕನ್ನಡ	1
3		ಸ.ಹಿ.ಪ್ರಾ.ಶಾಲೆ ಉಮಾಪೂರ	ಮರಾಠಿ	1
4		ಸ.ಹಿ.ಪ್ರಾ.ಶಾಲೆ	ಉರ್ದು	2

		ಉಮಾಪೂರ		
5		ಸ.ಕಿ.ಪ್ರಾ.ಶಾಲೆ ದಾಸರವಾಡಿ	ಕನ್ನಡ	2
6		ಸ.ಹಿ.ಪ್ರಾ.ಶಾಲೆ ರೋಳಾ	ಉರ್ದು	1
7		ಸ.ಹಿ.ಪ್ರಾ.ಶಾಲೆ ಅಟ್ಟೂರ	ಕನ್ನಡ	1
8		ಸ.ಹಿ.ಪ್ರಾ.ಶಾಲೆ ಸುಂಠಾಣ	ಕನ್ನಡ	2
9		ಸ.ಹಿ.ಪ್ರಾ.ಶಾಲೆ ಹತ್ಯಾಳ್	ಕನ್ನಡ	3
10		ಸ.ಹಿ.ಪ್ರಾ.ಶಾಲೆ ನಾರಾಯಣಪೂರ	ಕನ್ನಡ	1
11		ಸ.ಹಿ.ಪ್ರಾ.ಶಾಲೆ ಗೋರ್ಟಾ ಬಿ	ಕನ್ನಡ	2
12		ಸ.ಹಿ.ಪ್ರಾ.ಶಾಲೆ ಫುಲದಾರವಾಡಿ	ಕನ್ನಡ	1
13		ಸ.ಹಿ.ಪ್ರಾ.ಶಾಲೆ ಹುಲಸೂರ	ಕನ್ನಡ	2
14		ಸ.ಹಿ.ಪ್ರಾ.ಶಾಲೆ ಪರ್ತಾಪೂರ	ಉರ್ದು	1
15		ಸ.ಹಿ.ಪ್ರಾ.ಶಾಲೆ ತೊಗಲೂರ	ಕನ್ನಡ	1
		ಒಟ್ಟು		**22**

ಊ) 2006–07ನೇ ಸಾಲಿನಲ್ಲಿ ಮಂಜೂರಾದ ಸ.ಹಿ.ಪ್ರಾಶಾಲೆ ಕೊಹಿನೂರ ಗ್ರಾಮಸ್ಥರಿಂದ ದೂರು ಬಂದಿದ್ದು, ಈ ಕುರಿತು ಉಪನಿರ್ದೇಶಕರು (ಆಡಳಿತ) ಸಾ.ಶಿ.ಇ. ಬೀದರ ಇವರು ಇಲಾಖಾ ವಿಚಾರಣಾ ಕೈಗೊಂಡ ನಂತರ ಸಂಬಂಧಪಟ್ಟ ಶಾಲಾ ಮುಖ್ಯ ಗುರುಗಳು,

ಹಾಗೂ ವಲಯ ಸಂಪನ್ಮೂಲ ವ್ಯಕ್ತಿ ಇವರ ಮೇಲೆ ಕ್ರಮ ಕೈಗೊಂಡು ಅಮಾನತ್ತುಗೊಳಿಸಿದ್ದು, ಹಾಗೂ ವಲಯ ಸಹಾಯಕ ಶಿಕ್ಷಣಾಧಿಕಾರಿಗಳು ಹಾಗೂ ಸಂಬಂಧಪಟ್ಟ ಕ್ಷೇತ್ರ ಸಮನ್ವಯಾಧಿಕಾರಿಗಳು (ಪ್ರಭಾರ) ಮೇಲೆ ಕ್ರಮಕೈಗೊಳ್ಳುವಂತೆ ಆಯುಕ್ತರು, ಸಾ.ಶಿ.ಇ. ಗುಲ್ಬರ್ಗಾ ಇವರಿಗೆ ಶಿಫಾರಸ್ಸು ಮಾಡಲಾಗಿದ್ದು ಅದರಂತೆ ಆಯುಕ್ತರ ವಲಯ ಸಹಾಯಕ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳು (ಪ್ರಭಾರ) ಬಸವಕಲ್ಯಾಣ ಇವರನ್ನು ಅಮಾನತ್ತುಗೊಳಿಸಿರುತ್ತಾರೆ.

342 ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪ್ರೌಢಶಾಲೆಗಳನ್ನು ಪ್ರಸಕ್ತಸಾಲಿನಲ್ಲಿ ಅಥವಾ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭಿಸಲಾಗುವುದೇ; ಮಾಹಿತಿ ನೀಡುವುದು;

ಇ) ಕೊಪ್ಪಳ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕುಣಿಕೆರಿ, ಚಿಲವಾಡಗಿ, ಹಟ್ಟಿ ಮತ್ತು ಹಲವಾಗಿಲು ಗ್ರಾಮಗಳಲ್ಲಿ ಪ್ರೌಢ ಶಾಲೆಗಳ ಅವಶ್ಯಕತೆ ಬಗ್ಗೆ ಆ ಭಾಗದ ವಿದ್ಯಾರ್ಥಿಗಳ ಮತ್ತು ಗ್ರಾಮಸ್ಥರ ಬೇಡಿಕೆಯಾಗಿರುವ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಹಾಲಿ ಇರುವ ಸರ್ಕಾರಿ ಪ್ರೌಢಶಾಲೆಗಳಿಗೆ ಶಿಕ್ಷಕರು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವ ತನಕ ಈ ಶೈಕ್ಷಣಿಕ ವರ್ಷದಲ್ಲಿ ಯಾವುದೇ ಹೊಸ ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡಬಾರದೆಂದು ತೀರ್ಮಾನಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.